**ಅಸಲು ದಾವ ಸಂಖ್ಯೆ: 479/2021**
**ಪಿ.ಡಬ್ಲೂ -1**

ದಿಃ 24.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 2 ರಿಂದ 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ M D P ರವರಿಂದಃ-**

1. ದವಾಖಾನೆ ಗಲ್ಲಿ ಬಸ್ತವಾಡ ರಲ್ಲಿರುವ ಮನೆ ನಂಬರ 495 ಇಂದಿಗೂ ಸಹ ಮಾನಿಕ ಸದೆಪ್ಪ ಅಂಗ್ರೋಳಿ ರವರ ಹೆಸರಿನಲಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ಸದರಿ ಮನೆ ತನ್ನ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂದರೆ ಸದರಿ ಆಸ್ತಿ ನನ್ನ ಸ್ವಂತ ಆಸ್ತಿಯಾಗಿದ್ದು ನಾನು ಸ್ವಂತ ಆದಾಯದಿಂದ ಅದನ್ನು ಖರೀದಿಸಿದ ಕಾರಣ ಈ ದಾವೆಯಲ್ಲಿ ಸದರಿ ಆಸ್ತಿಯನ್ನು ಸೇರಿಸಿರುವುದಿಲ್ಲ. ಸದರಿ ಆಸ್ತಿ ಖರೀದಿಸಿದ ಬಗ್ಗೆ ಖರೀದಿ ಪತ್ರವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ .

2. 2 ರಿಂದ 4 ನೇ ಪ್ರತಿವಾದಿಯರು 5 ನೇ ಅಧಿಕಾ ಸಿವಿಲ್ ನ್ಯಾಯಾಲಯ ಬೆಳಗಾವಿ ಇಲ್ಲಿ ಅಸಲು ದಾವಾ ಸಂಖ್ಯೆ 1026/2022 ರಂತೆ ನನ್ನ ಹಾಗೂ ಜ್ಯೋತಿಬಾ, ನವ್ಯ ಕಾಕತಕರ, ಹಾಗೂ ನನ್ನ ತಾಯಿ ವಿರುದ್ಧ ಮನೆ ಆಸ್ತಿ ಸಂಖ್ಯೆ 495 ರ ಕುರಿತು ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಹಾಗೂ ಈ ದಾವೆಯ 1 ರಿಂದ 4 ನೇ ಪ್ರತಿವಾದಿಯರು Class-II ವಾರಸುದಾರರು ಎಂದು ಘೋಷಿಸಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಮನೆ ಸಂಖ್ಯೆ 495 ಗೆ ನಾನು ಹಾಗೂ 1 ರಿಂದ 4 ನೇ ಪ್ರತಿವಾದಿಯರು ಮಾಲೀಕರು ಎಂದು ಘೋಷಿಸಬೇಕೆಂದು ಸಹ ಕೇಳಿಕೊಂಡಿರುತ್ತಾರೆ ಎಂದರೆ ಸರಿ. ಸದರಿ

ಆಸ್ತಿಯಲ್ಲಿ ಜ್ಯೋತಿಬಾ ಹಾಗೂ ನವ್ಯ ಜ್ಯೋತಿಬಾ ಕಾಕತಕರ ರವರು ಕಾನೂನು ಬಾಹಿರವಾಗಿ ಸ್ವಾಧೀನದಲ್ಲಿರುತ್ತಾರೆ ಹಾಗೂ ಅವರಿಗೆ ಸೇರಿದ ವಸ್ತುಗಳನ್ನು ಸದರಿ ಆಸ್ತಿಯಿಂದ ತೆಗೆಸಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿ.ಸದರಿ ಮನೆಯನ್ನು ನಾನು ನವರತ್ನ ಜ್ಯೋತಿಬಾ ಕಾಕತಕರ ರವರಿಗೆ ಮಾರಾಟ ಮಾಡಿರುತ್ತೇನೆ. ನಾನು ಸದರಿಯವರಿಗೆ ಸದರಿ ಮನೆಯನ್ನು ಮಾರಾಟ ಮಾಡಿದ ಬಗ್ಗೆ ಈ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ.

3. ಈ ದಾವೆಯ ದಾವಾ ಆಸ್ತಿಗಳಲ್ಲಿ ಮನೆ ನಂಬರ 819 ಸೇರಿರುತ್ತದೆ, ಅದರ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆಯನ್ನು ನನ್ನ ತಾಯಿ ಹಾಗೂ ಅವರ ಸಹೋದರರು ಸೇರಿಕೊಂಡು ಹಳೆಯ ಒಂದು ಮನೆಯನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಮನೆ ನಂಬರ 819 ನ್ನು ಖರೀದಿಸಿರುತ್ತಾರೆ. ಸದರಿ ಹಳೆಯ ಮನೆಯ ನಂಬರ ಹೇಳಲು ಬರುವುದಿಲ್ಲ. ಮನೆ ನಂಬರ 819 ನ್ನು ಅನಂತ ಕುಡಚಿ ರವರಿಂದ ಖರೀದಿಸಲಾಗಿತ್ತು. ಸದರಿ ಮನೆಯನ್ನು ನನ್ನ ಮದುವೆಗೂ ಮೊದಲು ಖರೀದಿಸಿರುತ್ತಾರೆ. ನನ್ನ ಮದುವೆ 2006 ನೇ ಇಸವಿಯಲ್ಲಿ ಆಗಿರುತ್ತದೆ. ನನ್ನ ತಾಯಿಯ ಮದುವೆ 50 ವರ್ಷಗಳ ಹಿಂದೆ ಆಗಿರುತ್ತದೆ. ದಾವಾ ಆಸ್ತಿಯಾದ ಮನೆ ನಂಬರ 819 ರ ಖರೀದಿ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ.

4. ದಾವಾ ಸ್ವತ್ತುಗಳಲ್ಲಿ ಇರುವ ಜಮೀನಿನ ಸರ್ವೆ ನಂಬರ ಹೇಳಬಲ್ಲೆ. ಸದರಿ ಜಮೀನು ಸರ್ವೆ ನಂಬರ 69/2 ಮತ್ತು ಸರ್ವೆ ನಂಬರ 19/2 ಆಗಿರುತ್ತದೆ. ಸರ್ವೆ ನಂಬರ 69/2 ರಲ್ಲಿ 36 ಗುಂಟೆ 14 ಆಣಾ ಹಾಗೂ ಸರ್ವೆ ನಂಬರ 19/2 ರಲ್ಲಿ 2 ಗುಂಟೆ 4 ಆಣಾ ಜಮೀನು ಇರುತ್ತದೆ. ಸರ್ವೆ ನಂಬರ 69/2 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ತಿಳಿದಿಲ್ಲ. ಸರ್ವೆ

ನಂಬರ 69/2 ರಲ್ಲಿ ಒಟ್ಟು 3 ಎಕರೆ 27 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂಬರ 69/2 ರ ಪಹಣಿ ಪತ್ರದಲ್ಲಿ ಇತರ ಮಾಲೀಕರ ಹೆಸರು ಸಹ ನಮೂದು ಇದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸರ್ವೆ ನಂಬರ 19/2 ರ ಜಮೀನಿನ ಬೇರೆ ಮಾಲೀಕರನ್ನು ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

5. ಮನೆ ನಂಬರ 819 ನ್ನು ನನ್ನ ಮದುವೆಯಾದ ನಂತರ ಕಟ್ಟಲಾಯಿತು. ದಿಃ 07-02-2011 ರಂದು ಸದರಿ ಮನೆ ಕಟ್ಟಲು ಪ್ರಾರಂಭಿಸಲಾಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದ 2012 ನೇ ಇಸವಿಯಲಿ ಮನೆ ಕಟ್ಟಲು ಪ್ರಾರಂಭಿಸಲಾಯಿತು ಎಂದು ನುಡಿಯುತ್ತಾರೆ. ದಿಃ10-02-2011 ರಂದು 4 ನೇ ಪ್ರತಿವಾದಿ ಮನೆ ಕಟ್ಟುವಾಗ ಬೋರವೆಲ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೋರವೇಲ ಹಾಕಲು 4 ನೇ ಪ್ರತಿವಾದಿ ರವರು 50 ಸಾವಿರ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ತಾನು ಹಾಗೂ 4 ನೇ ಪ್ರತಿವಾದಿ ಸೇರಿಕೊಂಡು ಸದರಿ ಬೋರವೆಲನ್ನು ತಲಾ 50 ಸಾವಿರ ಖರ್ಚು ಮಾಡಿ ಹಾಕಲಾಗಿದೆ ಎಂದು ನುಡಿಯುತ್ತಾರೆ. ಸದರಿ ಮನೆ ನಂಬರ 819 ರ ಜಾಗದಲ್ಲಿ ನನ್ನ ಗಂಡ ಬಾಹುಬಲಿ ಪಾಟೀಲ ಹಾಗೂ 2 ರಿಂದ 4 ನೇ ಪ್ರತಿವಾದಿಯರು ಒಟ್ಟಾಗಿ ಜಾಗ ಹಂಚಿಕೊಂಡು ನಮ್ಮ ನಮ್ಮ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತೇವೆ. ನನ್ನ ಗಂಡ ಹಾಗೂ 2 ರಿಂದ 4 ನೇ ಪ್ರತಿವಾದಿಯರ ನಡುವೆ ಸದರಿ ಮನೆ ನಂಬರ 819 ರಲ್ಲಿ ವಿಭಾಗ ಆಗಿರುತ್ತದೆ. ಸಾಕ್ಷಿ ಮುಂದುವರೆದು ಸದರಿ ವಿಭಾಗದಂತೆ ತನಗೆ ಸೇರಿದ ಪಾಲಿಗೆ ಅನುಸಾರವಾಗಿ ನನ್ನ ಪಾಲಿಗೆ ಬಂದ ಆಸ್ತಿಯ ಕುರಿತು ದಾಖಲೆ ಮಾಡಿಕೊಟ್ಟಿರುವುದಿಲ್ಲ, ಅದೇ ಕಾರಣಕ್ಕೆ ಈ ದಾವೆಯನ್ನು ಹೂಡಿರುವುದಾಗಿ ನುಡಿಯುತ್ತಾರೆ. ಸದರಿ ಜಾಗದಲ್ಲಿ ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಯನ್ನು ಮನೆ ಕಟ್ಟಿಕೊಳ್ಳಬೇಕೆಂದು ನಮಗೆ ಯಾರೂ ಸಹ ಹೇಳಿರಲಿಲ್ಲ. ಸದರಿ ಮನೆ ನಂಬರ 819 ರಲ್ಲಿ

ನನಗೆ 27 ಫೂಟ್ ಜಾಗ ಬಂದಿರುವುದರ ಬಗ್ಗೆ ನನಗೆ ಪ್ರತಿವಾದಿಯರು ಲಿಖಿತವಾಗಿ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**